# ಆಧುನಿಕ ಸಮಾಜದಲ್ಲಿ ವಸತಿ ಶಾಲೆಗಳ ಮಹತ್ವ

ಭವ್ಯ ಭಾರತದ ಪರಂಪರೆಯಲ್ಲಿ ಶಿಕ್ಷಣಕ್ಕೆ ತನ್ನದೇಆದ ವಿಶಿಷ್ಟ ಹಾಗೂ ಮಹತ್ವದ ಸ್ಥಾನ ಸಂದಿದೆ.ಭಾರತವು ಶಿಕ್ಷಣದ ನಾಡು.ಭಾರತದ ಕಲೆ, ವಿಜ್ಞಾನ, ಸಾಹಿತ್ಯ, ತತ್ವಜ್ಞಾನಗಳ ಜ್ಯೋತಿ ಸಹಸ್ರಾರು ವರ್ಷಗಳಿಂದ ಬೆಳಕು ನೀಡುತ್ತಾ ಬಂದಿದೆ.ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ, ಜ್ಞಾನವೆಂಬ ಪ್ರಭೆಯನ್ನು ಪಡೆಯುವುದೇ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯಆದರ್ಶವಾಗಿದ್ದಿತು.ವ್ಯಕ್ತಿಯಆತ್ಮೋದ್ಧಾರಕ್ಕೆ ನೆರವು ನೀಡುವುದೇ ಶಿಕ್ಷಣದ ಗುರಿ.ಆಧ್ಯಾತ್ಮಿಕಪರಿಪೂರ್ಣತೆಯೆಡೆಗೆ ವ್ಯಕ್ತಿಯನ್ನ್ಕೊಂಡ್ಯೊಯ್ಯುವುದರಲ್ಲಿ ಶಿಕ್ಷಣವು ಪ್ರಭಾವಶಾಲಿಯಾದುದು.

ಪ್ರಾಚೀನ ನಾಗರೀಕತೆಯನ್ನು, ತನ್ನದೇಆದ ಸಂಸ್ಕೃತಿಯನ್ನು ಭಾರತವು ಹೊಂದಿದೆ.ಐರೋಪ್ಯರುಇನ್ನೂ ಶೈಶವಾವಸ್ಥೆಯಲ್ಲಿರುವಾಗ ನಮ್ಮ ಗುರುಕುಲಗಳಿಂದ ಜೀವನ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳು ಹೊರಬರುತ್ತಿದ್ದರು.ಆತ್ಮಘಾತಕವಾದ ಮಾನಸಿಕ ಚಟುವಟಿಕೆಗಳಿಗೆ ಪೂರ್ಣ ವಿರಾಮವನ್ನು ಹಾಕುವ 'ಚಿತ್ತ ವೃತ್ತಿ ವಿರೋಧ'ವನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದರು.

ಜೀವನ ಮೌಲ್ಯಗಳನ್ನು ರೂಢಿಸಿಕೊಂಡು ತಮ್ಮ ಕರ್ತವ್ಯಗಳನ್ನು ಕಾರ್ಯಗತಗೊಳಿಸುತ್ತಾ ಹತ್ತುಜನ ಮೆಚ್ಚುವಂತೆ ಬದುಕುತ್ತಿದ್ದರು.ಕೇವಲ ಐಹಿಕ ಭೋಗ-ಭಾಗ್ಯಗಳನ್ನು ಸವಿಯುವುದಷ್ಟೇ ಮಾನವನಜೀವನದಉದ್ದೇಶವಲ್ಲ.

ಸುಮಾರುಎರಡು ಶತಮಾನಗಳ ಕಾಲ ಅನುಭವಿಸಿದ ವಿದೇಶೀ ಆಳ್ವಿಕೆಯ ಸಂಕೇತವಾಗಿ'ಅನಕ್ಷರತೆಯ ಕೂಪ', ಅಜ್ಞಾನದಆಗರ', 'ದಾರಿದ್ರ್ಯದ ಹುಟ್ಟುಮನೆ' ಎಂಬ ಅಪಹಾಸ್ಯಕ್ಕೆ ಭಾರತಈಡಾಯಿತು.ಒಂದುಕಾಲದಲ್ಲಿಉತ್ತಮವಾಗಿಕಾರ್ಯನಿರ್ವಹಿಸುತ್ತಿದ್ದ ವಸತಿ ಶಿಕ್ಷಣ ಸಂಸ್ಥೆಗಳು ಆಧುನಿಕಕಾಲದಲ್ಲಿಯೂ ಅವುಗಳ ಅವಶ್ಯಕತೆಯಕಾರಣವಾಗಿ ಹಾಗೂ ಪಬ್ಲಿಕ್ ಶಾಲೆಗಳಲ್ಲಿನ ಕೊರತೆಗಳನ್ನು ಹೋಗಲಾಡಿಸುವ ಸಲುವಾಗಿ ಹೆಚ್ಚು ಮಹತ್ವವನ್ನು ಪಡೆದವು.

**ಭಾರತದ ಪ್ರಮುಖ ವಸತಿ ಶಾಲೆಗಳು:**

- ಗ್ರಾಮೀಣ ಪ್ರತಿಭಾನ್ವಿತ ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವಉದ್ದೇಶದಆಂಧ್ರಪ್ರದೇಶದ ವಸತಿ ಶಾಲೆಗಳು.

- ಭಾರತೀಯ ಸಮಾಜದಲ್ಲಿಇಲ್ಲವಾಗಿರುವ ಮೌಲ್ಯಗಳನ್ನು ಮತ್ತೆರೂಪಿಸುವ, ಭಾರತೀಯ ಸಂಸ್ಕೃತಿಯನ್ನುಉತ್ತಮಪಡಿಸುವ ಹಾಗೂ ವಿದ್ಯಾರ್ಥಿಯನ್ನು"ಪೂರ್ಣ ಪುರುಷ" ನಾಗಿ ಮಾಡುವಉದ್ದೇಶ ಹೊಂದಿದ ಭಾವನ್‌ಅವರಗಾಂಧಿ ವಿದ್ಯಾಶ್ರಮಗಳು.
- ಮಾನವತಾ ಗುಣಗಳಿಗೆ ಹೆಚ್ಚು ಮಹತ್ವ ನೀಡುವಎಂ.ಎನ್.ಎಸ್.ಎಸ್.ರಾಯ್ ವಸತಿ ಶಾಲೆಗಳು.
- ಶಿಶು ಕೇಂದ್ರಿತ ಶಿಕ್ಷಣ ಪದ್ಧತಿಗೆ ಹೆಚ್ಚು ಮಹತ್ವ ನೀಡುವ ಋಷಿ ವ್ಯಾಲಿ ಶಾಲೆಗಳು, ಡೆಹರಾಡೂನ್ ಶಾಲೆಗಳು, ತ್ರಿವೇಣಿಅಕಾಡೆಮಿ ಶಾಲೆಗಳು.
- ಧರ್ಮ ಹಾಗೂ ಶಿಕ್ಷಣವನ್ನು ಜೊತೆಜೊತೆಯಾಗಿಕೊಂಡೊಯ್ಯುವಉದ್ದೇಶದ ಶ್ರೀ ಸಾಯಿಬಾಬಾ ಅವರ ಶಾಲೆಗಳು, ರಾಮಕೃಷ್ಣ ವಿದ್ಯಾಶಾಲೆಗಳು, ಶ್ರೀ ಆದಿಚುಂಚನಗಿರಿ ಸ್ವಾಮೀಜಿಅವರ ಶಾಲೆಗಳು, ಶ್ರೀ ಸುತ್ತೂರು ಮಠದ ವಸತಿ ಶಾಲೆಗಳು.
- ಹಿಂದುಳಿದ ಗಿರಿಜನರಉದ್ಧಾರಕ್ಕಾಗಿಯೇತೆರೆದಡಾ.ಸುದರ್ಶನಅವರ ವಿವೇಕಾನಂದಗಿರಿಜನಕಲ್ಯಾಣಕೇಂದ್ರದ ವಸತಿ ಶಾಲೆಗಳು.
- ಮನೆಯ ವಾತಾವರಣದಲ್ಲಿ ಪಡೆಯಲಾಗದ ಶಿಕ್ಷಣವನ್ನು ನೀಡುವಉದ್ದೇಶದಎಂ.ಇ.ಎಸ್. ವಸತಿ ಶಾಲೆಗಳು.
- ವಿದೇಶದಲ್ಲಿ ನೌಕರಿ ಮಾಡುತ್ತಿರುವ್ ಭಾರತೀಯರ ಮಕ್ಕಳಿಗೆ ಶಿಕ್ಷಣ ನೀಡುವಉದ್ದೇಶದಅಮೇರಿಕನ್ ಫ್ರೆಂಡ್ ಶಿಫ್ ವಸತಿ ಶಾಲೆಗಳು.
- ಸೈನ್ಯದಲ್ಲಿತಮ್ಮ ಭವಿಷ್ಯ ರೂಪಿಸಿಕೊಳ್ಳಲಿರುವ ಹುಡುಗರಿಗಾಗಿ ಸೈನಿಕ ಶಾಲೆಗಳು.
- ಟಿಬೇಟಿನಿಂದ ಬಂದ ನಿರಾಶ್ರಿತರ ಮಕ್ಕಳಿಗೆ ಅವರ ಸಂಸ್ಕೃತಿಯನ್ನು,ಅವರ ಸೋಪಜ್ಞತೆಯನ್ನು ಉಳಿಸಿ ಬೆಳೆಸುವ ಉದ್ದೇಶದಕೇಂದ್ರೀಯಟಿಬೇಟಿಯನ್ ಶಾಲೆಗಳು.
- ಗ್ರಾಮೀಣ ಬಡ ಮಕ್ಕಳಿಗಾಗಿ ಶಿಕ್ಷಣ ನೀಡುವಉದ್ದೇಶದಕರ್ನಾಟಕರಾಜ್ಯ ಸರ್ಕಾರದ ಮೊರಾರ್ಜಿದೇಸಾಯಿ ವಸತಿ ಶಾಲೆಗಳು.
- ಹೆಣ್ಣು ಮಕ್ಕಳಿಗಾಗಿ ಶಿಕ್ಷಣ ನೀಡುವಉದ್ದೇಶದಕರ್ನಾಟಕರಾಜ್ಯ ಸರ್ಕಾರದಕಿತ್ತೂರರಾಣಿಚೆನ್ನಮ್ಮ ವಸತಿ ಶಾಲೆಗಳು.
- ಅಂಗವಿಕಲ ಮಕ್ಕಳಲ್ಲಿ ಆತ್ಮ ವಿಶ್ವಾಸತುಂಬಿ ಸಮಾಜದ ಮುಖ್ಯ ವಾಹಿನಿಗೆ ಸೇರ್ಪಡೆ ಮಾಡಲು ಶಿಕ್ಷಣ ನೀಡುವ ಅಂಗವಿಕಲ ಮಕ್ಕಳ ವಸತಿ ಶಾಲೆಗಳು.

- ಪುಟ್ಟ ಭಾರತವನ್ನೇತಮ್ಮ ಒಡಲಲ್ಲಿಟ್ಟುಕೊಂಡುಜೀವನ ಶಿಕ್ಷಣ ನೀಡುವಂತಹ ಶ್ರೀ ರವೀಂದ್ರನಾಥಟಾಗೋರ್ ವಸತಿ ಶಿಕ್ಷಣ ಸಂಸ್ಥೆಗಳು.
- ವಿಶೇಷವಾಗಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಒಳ್ಳೆಯಗುಣಮಟ್ಟದ ಸಂಸ್ಕೃತಿಯನ್ನು ಒಳಗೊಂಡ ಮೌಲ್ಯಾಧಾರಿತ ಶಿಕ್ಷಣ ಕೊಡುವುದರೊಂದಿಗೆ, ಪರಿಸರಜಾಗೃತಿಯನ್ನುಉಂಟುಮಾಡುವ, ಸಾಹಸ ಪ್ರವೃತ್ತಿಯನ್ನು ಬೆಳೆಸುವ ಮತ್ತು ಶಾರೀರಿಕ ಶಿಕ್ಷಣವನ್ನು ನೀಡುವ, ವಿದ್ಯಾರ್ಥಿಗಳಿಗೆ ಮೂರು ಭಾಷೆಗಳಲ್ಲಿ ಓದು, ಬರೆಹ ಕಲಿಸುವ, ವಿದ್ಯಾರ್ಥಿಗಳ ವಿಶೇಷ ವಲಸೆ ನೀತಿಯ ಮುಖಾಂತರರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವ, ಪ್ರತಿಜಿಲ್ಲೆಯಲ್ಲಿಅತ್ಯುತ್ತಮಗುಣಮಟ್ಟದ ಶಾಲಾ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವ ಮತ್ತು ಅನುಭವಗಳನ್ನು ಹಾಗೂ ಸೌಲಭ್ಯಗಳನ್ನು ಪರಸ್ಪರ ವಿನಿಮಯಿಸಿಕೊಳ್ಳುವ ಉದ್ದೇಶದ ಭಾರತ ಸರ್ಕಾರವು ಪೂರ್ಣಆರ್ಥಿಕ ನೆರವನ್ನು ನೀಡಿ ಆಡಳಿತ ನಿರ್ವಹಣೆ ಮಾಡುತ್ತಿರುವಜವಾಹರ ನವೋದಯ ವಿದ್ಯಾಲಯ ವಸತಿಶಾಲೆಗಳು.

ಇವಷ್ಟೇ ಅಲ್ಲದೆಇನ್ನೂ ಹಲವು ರೀತಿಯ ಉದ್ದೇಶಗಳನ್ನು ಹೊಂದಿದ ವಸತಿಶಾಲೆಗಳಿವೆ. ವಸತಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ದೊರಕಲು ಸಾಧ್ಯವಾಗಲು ಸಹಕಾರಿಯಾಗುವ ಅಂಶಗಳು ಹಲವಿವೆ. ದಿನದಇಪ್ಪತ್ನಾಲ್ಕು ಗಂಟೆಗಳೂ ವಿದ್ಯರ್ಥಿಗಳು ಹಾಗೂ ಶಿಕ್ಷಕರು ಪರಸ್ಪರ ಲಭ್ಯವಿರುತ್ತಾರೆ.ಆಯ್ಕೆ ಪರೀಕ್ಷೆಗಳ ಮೂಲಕ ಪ್ರತಿಭಾವಂತಅರ್ಹ ಮಕ್ಕಳ ಸೇರ್ಪಡೆಯಾಗುತ್ತದೆ.ಸುಸಜ್ಜಿತ ಕಟ್ಟಡಗಳು, ಗ್ರಂಥಾಲಯ, ಪ್ರಯೋಗಾಲಯ, ಆಧುನಿಕ ಪಾಠೋಪಕರಣಗಳು ವಿದ್ಯಾರ್ಥಿಗಳಿಗೆ ಲಭ್ಯ. ವಿದ್ಯಾರ್ಥಿಗಳಿಗೆ ಮೇಲ್ವಿಚಾರಣಅಭ್ಯಾಸ, ಪೂರ್ವಭಾವಿ ತರಗತಿಗಳು, ಪರಿಹಾರ ಬೋಧನೆ ಹಾಗೂ ಪ್ರತಿಭಾವಂತ ಮಕ್ಕಳಿಗಾಗಿ ವಿಶೇಷ ತರಗತಿಗಳನ್ನು ನಡೆಸಲುಅವಕಾಶವಿರುತ್ತದೆ.ಎಲ್ಲಾ ಮಕ್ಕಳಿಗೂ ಸಮಾನಅವಕಾಶದಕಾರಣವಾಗಿಆರೋಗ್ಯಕರ ಸ್ಪರ್ಧೆ ಮಕ್ಕಳ ನಡುವೆ ಸಾಧ್ಯ. ಸದನ ವ್ಯವಸ್ಥೆಇದ್ದು ಸದನ ಪಾಲಕ: ಸದನ ಪಾಲಕಿಯರ ಮೇಲ್ವಿಚಾರಣಾಕಾರಣವಾಗಿಕುಟುಂಬ ವಾತಾವರಣ ಹಾಗೂ ವಿದ್ಯಾರ್ಥಿ ನಿಲಯದಲ್ಲಿಅನುಭವ ವಿನಿಮಯ ಸಾಧ್ಯ ಹಾಗೂ ಇದು ಸಮಯ ನಿರ್ವಹಣೆಗೂ, ಕಲಿಕಾ ಪ್ರಕ್ರಿಯೆಗೂ ಸಹಕಾರಿಯಾಗುತ್ತದೆ.

ವಸತಿ ಶಾಲೆಗಳಲ್ಲಿ ಸಹಜೀವನ, ಸಹಭೋಜನ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಮಾನತೆಯಅರಿವನ್ನು ಮೂಡಿಸುತ್ತದೆ.ನುರಿತಅಧ್ಯಾಪಕ ವರ್ಗದ ಸೇವೆ ಸದಾ ಲಭ್ಯ.ಕಾರ್ಯಾನುಭವ ಶಿಕ್ಷಣದಲ್ಲಿ ಸಮಾಜದಲ್ಲಿಯಾವ ಕೆಲಸವೂ ಕೀಳಲ್ಲ ಎಂಬ ಉದಾತ್ತ ಭಾವನೆಯ ಬೆಳವಣಿಗೆ ಆಗುತ್ತದೆ.ವೃತ್ತಿಪರ ಶಿಕ್ಷಣವನ್ನು ಹೊಂದುವುದರಿಂದ

ಬದುಕಿನಲ್ಲಿತಮಗಿಷ್ಟವಾಗುವ ಕೆಲಸದಲ್ಲಿ ತೊಡಗಿಸಿಕೊಳ್ಳುವ ಅವಕಾಶ ದೊರೆಯುತ್ತದೆ.ವಿಭಿನ್ನ ಪರಿಸರದಿಂದ ಬಂದ ಮಕ್ಕಳು ಒಂದೇಕುಟುಂಬದವರಂತೆಜೀವಿಸುವುದರಿಂದರಾಷ್ಟ್ರೀಯ ಭಾವೈಕ್ಯತೆಯ ಬೆಳೆವಣಿಗೆಗೆ ವಸತಿ ಶಾಲೆಗಳು ಸಹಕರಿಸುತ್ತವೆ.

ವಸತಿ ಶಾಲೆಗಳಿಂದ ಉತ್ತಮ ಶಿಕ್ಷಣ ದೊರಕುತ್ತದೆಂಬ ನಿರೀಕ್ಷೆಯನ್ನು ಸಮಾಜವು ಹೊಂದಿರುತ್ತದೆ.ನಿರೀಕ್ಷೆಗೆತಕ್ಕಂತೆಕಾರ್ಯನಿರ್ವಹಿಸುವ ಜವಾಬ್ದಾರಿ ವಸತಿ ಶಾಲೆಗಳದ್ದಾಗಿರುತ್ತದೆ.ಕೆಲಸಕ್ಕೆ ಹೋಗುವ ಪೋಷಕರು, ಕೌಟುಂಬಿಕ ಸಮಸ್ಯಗಳಿರುವವರಿಗೆ, ತಮ್ಮ ಮಕ್ಕಳು ಉತ್ತಮ ಶಿಕ್ಷಣದೊಂದಿಗೆ ಸ್ವಾವಲಂಬಿಗಳಾಗಿಯೂ ಬೆಳೆಯಲೆಂಬ ಆಶಯವುಳ್ಳ ಪೋಷಕರು ವಸತಿ ಶಾಲೆಯ ಶಿಕ್ಷಣವನ್ನು ಹೆಚ್ಚು ಇಷ್ಟಪಡುತ್ತಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೂಚಿಸಿರುವಂತೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಪಠ್ಯ ಮತ್ತು ಪಠ್ಯೇತರ ವಿಷಯಗಳಲ್ಲಿ ಪ್ರಾಥಮಿಕ ಹಂತದಿಂದಲೂ ಅಳವಡಿಸಿಕೊಳ್ಳಲು ವಸತಿ ಶಾಲೆಗಳಲ್ಲಿ ಸಾಧ್ಯವಿದೆ. ನಮ್ಮದೇಶದಲ್ಲಿನ ಪ್ರಚಲಿತ ಸಾಮಾಜಿಕ ಮತ್ತುರಾಜಕೀಯ ಹಿನ್ನೆಲೆಯಲ್ಲಿ, ವಿಶೇಷವಾಗಿ ಸಮಾಜದಲ್ಲಿನ ವಿವಿಧ ವರ್ಗಗಳಲ್ಲಿರುವ ತಾರತಮ್ಯ, ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಆಗುತ್ತಿರುವ ನಾಗಾಲೋಟದ ಮುನ್ನಡೆಯಿಂದಉಂಟಾಗಿರುವ ಪರಿಸರದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಮಗುವಿನ ಸುಪ್ತ ಚೇತನಕ್ಕೆ ಚಾಲನೆಯನ್ನು ನೀಡಲು ವಸತಿ ಶಾಲೆಗಳ ಅವಶ್ಯಕತೆ ಹಿಂದೆಂದಿಗಿಂತಲೂಇಂದು ಹೆಚ್ಚಾಗಿದೆ.



**ಲೇಖಕರು:**

**ಬಿ.ಆರ್.ಗಣೇಶ. ಎಂ.ಎ.,ಎಂ.ಎಡ್.**

**ಕನ್ನಡ ಭಾಷಾ ಶಿಕ್ಷಕರು,**

**ಜ.ನ.ವಿ. ಆಲಮಟ್ಟಿ**